# ನಾರಿ

■ ಜಿ.ಮುದ್ದುವೀರಸ್ವಾಮಿ ಹಿರೇಮಳಲಿ



ಇರುಳು ಹತ್ತೂವರೆ ಸಮಯ. ಮಳಲಿಯ ಶಿವಕುಮಾರನನ್ನು ನಲ್ಲೂರಿನ ನಿಲ್ದಾಣದಲ್ಲಿ ಇಳಿಸಿದ ಬಸ್ಸು ಶರವೇಗದಿಂದ ಮುನ್ನುಗ್ಗಿತು. ಅಲ್ಲಿಂದ ಊರಿಗೆ ಐದು ಕಿಲೋಮೀಟರ್‌ಗಳ ದೂರ. ಜನ ಸಂಚಾರವಿರಲಿಲ್ಲ. ಯಾವುದಾದರೂ ವಾಹನ ಬರಬಹುದೆಂದು ನಿರೀಕ್ಷಿಸುತ್ತ ನಿಂತ. ಅತ್ತ ಹೋಗುವ ಯಾವುದೇ ವಾಹನ ಸುಳಿಯದಿದ್ದಾಗ ಸಿಗರೇಟಿಗೆ ಬೆಂಕಿ ಸೋಕಿಸಿ ನಡೆದೇ ಹೊರಟ.

ದಾರಿ ಅಸ್ಪಷ್ಟ. ಮೋಡಗಳ ಮರೆಯಲ್ಲಿ ಚಂದಿರನ ಕಣ್ಣಾಮುಚ್ಚಾಲೆ ಆಟ. ತಿಳಿನೀರಕಟ್ಟೆ ಗ್ರಾಮ ದಾಟುವಾಗ ಒಟ್ಟಿಗೆ ಬೊಗಳುತ್ತಿದ್ದ ನಾಯಿಗಳ ಕರ್ಣ ಕಠೋರ ಶಬ್ದಕ್ಕೆ ಒಮ್ಮೆ ಬೆಚ್ಚಿ ಮುಂದೆ ಸಾಗಿದ. ಊರು ದಾಟಿದಾಗ ಮುಂದೆ ತಲೆಯ ಮೇಲೆ ಬುಟ್ಟಿ ಹೊತ್ತು ಸಾಗುತ್ತಿದ್ದ ಒಂಟಿ ಮಹಿಳೆ ನಕ್ಷತ್ರಗಳ ತಿಳಿಬೆಳಕಲ್ಲಿ ಗೋಚರಿಸಿದಳು. ಕ್ಷಣ ಅಧೀರನಾದವನಿಗೆ ಅಚ್ಚರಿ.

ಹೆಜ್ಜೆ ಸಪ್ಪಳ ಕೇಳಿ ನಿಂತ ಆಕೆ ಈತನನ್ನು 'ಯಾವೂರಣ್ಣ?' ಎಂದು ಕೇಳಿದಳು ಗಾಬರಿಯ ಧ್ವನಿಯಲ್ಲಿ. 'ಮಳಲಿ' ಎಂದವನು ತುಸು ಬೆರಗಿನಿಂದ 'ನಿಮ್ದ್ಯಾವೂರಕ್ಕ?' ಎಂದ. 'ಮಾರನ ಹಳ್ಳಿ, ಚನ್ನಗಿರಿ ಸಂತೆಗೋಗಿದ್ದೆ, ತಡವಾಯ್ತು' ಎಂದಳು. ಮಾರನಹಳ್ಳಿ ಮಳಲಿಯ ಪಕ್ಕದ ಗ್ರಾಮ.

ಸದ್ಯ! ದಾರಿಗೊಬ್ಬರು ಜೊತೆಯಾದರೆಂದು ಒಳಗೊಳಗೆ ಖುಷಿಪಡುತ್ತ, ಆಕೆಯೊಂದಿಗೆ ಲೋಕಾಭಿರಾಮವಾಗಿ ಮಾತನಾಡುತ್ತ ಹೆಜ್ಜೆ ಹಾಕಿದ. ಮಾತಿನ ನಡುವೆ ಆಕೆ 'ನಿಮ್ಮೂರಿನ ಗಾಡಿಯೊಂದು ನಲ್ಲೂರಿನ ರೈಸ್ ಮಿಲ್‌ನಿಂದ  ಈಗ್ತಾನೆ ಹೋಯ್ತು, ಯಾಕೆ ನಿನಗೆ ಸಿಗಲಿಲ್ವಾ?' ಎಂದಳು. 'ಇಲ್ಲಾ' ಎಂದುತ್ತರಿಸಿದವನಿಗೆ ಏನೋ ಹೊಳೆದಂತಾಗಿ ತಕ್ಷಣ ಕೇಳಿದ, 'ಗಾಡಿ ನಿಮಗೆ ಕಂಡಿದ್ದರೆ ನೀವ್ಯಾಕೆ ಅದರಲ್ಲಿ ಹೋಗಲಿಲ್ಲ ?' ಗಲಿಬಿಲಿಗೊಂಡವಳು ಕೊಟ್ಟ ಉತ್ತರ ಅಸ್ಪಷ್ಟವಾಗಿತ್ತು.

ನಡೆಯುತ್ತಿದ್ದವರಿಗೆ ಶೀನಪ್ಪನ ತೋಟ ಎದಿರಾಯ್ತು. ರಸ್ತೆಯ ಒಂದು ಬದಿ ತೋಟ ಇನ್ನೊಂದು ಬದಿ ಸುಬಾಬುಲ್ ಮರಗಳ ಸಾಲು. ದಾರಿ ಕತ್ತಲು ಹೊದ್ದು ಮಲಗಿತ್ತು. ಆಕೆ 'ಒಂದ್ನಿಮಿಷ ವಂದಾ ಮಾಡ್ತೀನಿ' ಎಂದು ತೋಟದ ಬೇಲಿಯ ಪಕ್ಕ ಕುಳಿತಳು. ಇವನು ಮರಗಳ ಮರೆಯಲ್ಲಿ ನಿಂತು ಮೂತ್ರ ವಿಸರ್ಜಿಸಿದ. ರಸ್ತೆಗೆ ಬಂದವನಿಗೆ ಆಕೆ ಕಾಣಲಿಲ್ಲ. ಒಂದೆರಡು ನಿಮಿಷ ಕಾದರೂ ಆಕೆಯ ಸುಳಿವಿಲ್ಲ. ದಾಪುಗಾಲಲ್ಲಿ ತೋಟ ದಾಟಿದ. ಮುಂದೆ ದಾರಿ ಕಾಣುತ್ತಿತ್ತು ಆಕೆ ಕಾಣಲಿಲ್ಲ. ಕ್ಷಣ ವಿಚಲಿತನಾದ.